ಒಳಗೊಂಡಿದೆ. ಪೂರಕ ಅಂದಾಜಿನ ವೆಚ್ಚಗಳಿಗೆ ಒಟ್ಟಾರೆ ಉಳಿತಾಯಗಳಿಂದ ಹಣ ಒದಗಿಸಲಾಗುವುದೆಂದುತೆ ನಿರೀಕ್ಷಿಸಲಾಗಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 0.5ರಷ್ಟು ಹೆಚ್ಚುವರಿ ವಿತ್ತೀಯ ಅವಕಾಶವನ್ನು ಒಂದು ಬಾರಿ ಕ್ರಮವಾಗಿ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಮೂಲಕ ಸೃಜಿಸಲಾಗುವುದು. ಹೊಸ ನೇಮಕಾತಿಗಳ ಮೇಲೆ ನಿಯಂತ್ರಣ, ಭಾರತ ಸರ್ಕಾರದಿಂದ ಋಣ ತೀರಿಕೆ, ಋಣ ಕ್ರೋಢೀಕರಣ ಮತ್ತು ಪರಿಹಾರ ಸೌಲಭ್ಯಗಳು, ವೇತನಗಳು, ನಿವೃತ್ತಿ ವೇತನಗಳು ಮತ್ತು ಬಡ್ಡಿ ಮೇಲಿನ ವೆಚ್ಚದ ಹೆಚ್ಚಳವನ್ನು ನಿರ್ಬಂಧಿಸುವುದಕ್ಕೆ ನೆರವಾಗುವುವು. 5ನೇ ರಾಜ್ಯ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸಿರುವುದರಿಂದ ಸಂಬಳದ ವೆಚ್ಚವು 2005–06ರಲ್ಲಿ ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ 3.42 ರಿಂದ 2008–09ರ ಪರಿಷ್ಕೃತ ಅಂದಾಜಿನಲ್ಲಿ ಶೇಕಡಾ 4.27 ರಷ್ಟಕ್ಕೆ ಹೆಚ್ಚಾಗುವ ಸಾಧ್ಯತೆ ಇದೆ. ನಿವೃತ್ತಿ ವಯೋಮಿತಿಯನ್ನು 2008–09ನೇ ಸಾಲಿನಲ್ಲಿ 60 ವರ್ಷಗಳಿಗೆ ಹೆಚ್ಚಿಸಲಾಯಿತು. ಈ ಬದಲಾವಣೆಯು ನಿವೃತ್ತಿ ವೇತನ ವೆಚ್ಚದಲ್ಲಿ ಇಳಿಕೆ ಉಂಟು ಮಾಡುವುದೆಂದು ಅಂದಾಜಿಸಲಾಗಿದೆ.

19. ವಿತ್ತೀಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ತರುವುದಕ್ಕಾಗಿ ಆಯವ್ಯಯೇತರ ಸಾಲಗಳನ್ನು 2008–09ನೇ ಸಾಲಿನಲ್ಲಿ ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಈ ವ್ಯವಸ್ಥೆಯನ್ನು ಮಧ್ಯಮಾವಧಿ ವಿತ್ತೀಯ ಯೋಜನೆಯ ಅವಧಿಯಲ್ಲಿ ಮುಂದುವರಿಸಲು ಯೋಜಿಸಲಾಗಿದೆ. ರಾಜ್ಯದ ಆಯವ್ಯಯದ ಮೇಲೆ ಅವಲಂಬಿತವಾಗದೆ ತಮ್ಮ ಸ್ವಂತ ಮೂಲಗಳಿಂದಲೇ ಸಾಲ ತೀರಿಸಿಕೊಳ್ಳುವ ಶಕ್ತಿ ಹೊಂದಿರುವ ಸಂಸ್ಥೆಗಳಿಗೆ ಮಾತ್ರ ಸಾಲ ಪಡೆಯಲು ಅನುಮತಿ ನೀಡಲಾಗುವುದೆಂದು ನಿರೀಕ್ಷಿಸಲಾಗಿದೆ.

ಅಧ್ಯಾಯ–3

ಸ್ಥೂಲ ಆರ್ಥಿಕ ದೃಷ್ಟಿಕೋನ

ಎ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಮುನ್ನಂದಾಜು

20. ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿವಿಧ ವಲಯಗಳು ನೀಡಿರುವ ಕೊಡುಗೆಯನ್ನು ಕೋಷ್ಟಕ 6 ತೋರಿಸುತ್ತದೆ. ಸೇವಾ ವಲಯ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಪ್ರಮುಖ ಕೊಡುಗೆಯನ್ನು ನೀಡುವುದು ಮುಂದುವರಿದಿದೆ. ಕೃಷಿ ವಲಯದ ಕೊಡುಗೆ ಸತತವಾಗಿ ಕಡಿಮೆಯಾಗುತ್ತಿದೆ.

ಕೋಷ್ಟಕ 6

ಮೂಲ ಕೈಗಾರಿಕೆಯಿಂದ ಆಂಶಿಕ ವೆಚ್ಚದಲ್ಲಿ (ಸ್ಥಿರ ಬೆಲೆಗಳು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

ಉದ್ಯಮ	2001–02	2002–03	2003–04	2004–05	2005–06	2006–07	2007–08 ಕ್ಷಿಪ್ರ ಅಂದಾಜು	2008–09 ಮುಂಗಡ ಅಂದಾಜು
ಪ್ರಾಥಮಿಕ	26538	24672	21850	27013	28135	27684	32023	30374
ದ್ವಿತೀಯ	26384	29180	30762	32322	38080	40618	44091	466664
ತೃತೀಯ	52638	56508	61561	66125	73806	80769	89388	97616
ಒಟ್ಟು	**105560**	**110360**	**114173**	**125460**	**140021**	**149071**	**165502**	**174654**
ವಿವಿಧ ವಲಯಗಳ ಶೇಕಡಾವಾರು ಪಾಲು								
ಪ್ರಾಥಮಿಕ	25.1	22.4	19.1	21.5	20.1	18.6	19.3	17.4
ದ್ವಿತೀಯ	25.0	26.4	26.9	25.8	27.2	27.2	26.6	26.7
ತೃತೀಯ	49.9	51.2	53.9	52.7	52.7	54.2	54.1	55.9

ಮೂಲ: ಆರ್ಥಿಕ ಸಮೀಕ್ಷೆ 2008–09, ಅಂಕಿಅಂಶಗಳ ನಿರ್ದೇಶನಾಲಯ

ಬಿ. 2008–09ರಲ್ಲಿ ರಾಜ್ಯದ ಆರ್ಥಿಕ ಉತ್ಪನ್ನದ ಬೆಳವಣಿಗೆ ಮತ್ತು 2009–10ರಲ್ಲಿನ ನಿರೀಕ್ಷೆ:

21. ರಾಜ್ಯದ ವಾಸ್ತವಿಕ ವಾರ್ಷಿಕ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ಗತಿ 2007–08ರಲ್ಲಿ ಶೇಕಡಾ 11 ಇದ್ದು (ಸ್ಥಿರ ದರಗಳಲ್ಲಿ) ಅದು 2008–09ರಲ್ಲಿ ಶೇ. 5.5 (ಸ್ಥಿರ ದರಗಳಲ್ಲಿ) ಆಗಬಹುದೆಂದು ಅಂದಾಜು ಮಾಡಲಾಗಿದೆ. ಆರ್ಥಿಕ ಅಂಕಿಅಂಶಗಳ ನಿರ್ದೇಶನಾಲಯದಲ್ಲಿ ಲಭ್ಯವಿರುವ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, 2009–10ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ದರ ಸ್ವಲ್ಪ ಕಡಿಮೆ ಆಗುವ ಸಂಭವ ಕಂಡುಬಂದಿದೆ. 2007–08ರಲ್ಲಿ ಕೃಷಿ ವಲಯ ಶೇ.15.6ರಷ್ಟು ಬೆಳವಣಿಗೆ ಕಂಡಿದ್ದರೆ 2008–09ರಲ್ಲಿ ಮುಂಗಾರು ಮಳೆ ಕಡಿಮೆಯಾಗಿದ್ದರಿಂದ ಅದು ಶೇ. 5.7ರಷ್ಟು ಕಡಿಮೆ ಬೆಳವಣಿಗೆಯನ್ನು ಹೊಂದಬಹುದೆಂದು ಅಂದಾಜು ಮಾಡಲಾಗಿದೆ. ಕೈಗಾರಿಕಾ ವಲಯ, 2007–08ರಲ್ಲಿ ಶೇ. 8.8ರಷ್ಟು ಬೆಳವಣಿಗೆಯನ್ನು ಹೊಂದಿದ್ದು, 2008–09ರಲ್ಲಿ ಈ ಬೆಳವಣಿಗೆ ಶೇ. 5.8ರಷ್ಟು ದರದಲ್ಲಿ ಆಗಬಹುದೆಂದು ನಿರೀಕ್ಷಿಸಲಾಗಿದೆ. ಸೇವಾ ವಲಯದ ಬೆಳವಣಿಗೆ 2007–08ರಲ್ಲಿ ಶೇ. 10.7 ಇದ್ದು, 2008–09ರಲ್ಲಿ ಅದು ಶೇ. 9.2ಕ್ಕೆ ಇಳಿಯಬಹುದೆಂದು ಅಂದಾಜು ಮಾಡಲಾಗಿದೆ. ರಾಷ್ಟ್ರೀಯ ಆರ್ಥಿಕತೆಯಲ್ಲಿ ಇರುವ ಅನಿಶ್ಚಿತತೆಗಳನ್ನು ಗಮನಿಸಿದಾಗ ಇಂಥ ಕಡಿಮೆ ದರದ ಪ್ರಗತಿ ಆಶ್ಚರ್ಯಕರವಲ್ಲ.

22. ಬಾಹ್ಯ ಆರ್ಥಿಕ ದೃಷ್ಟಿಕೋನ ಮತ್ತು ಕೇಂದ್ರ ಸರ್ಕಾರವು 2009–10ಕ್ಕೆ ಮಂಡಿಸಿದ ಸ್ಥೂಲ ಆರ್ಥಿಕ ಚೌಕಟ್ಟಿನ ಹೇಳಿಕೆಯಲ್ಲಿ ವಿವರಿಸಿರುವ ರಾಷ್ಟ್ರದ ಸ್ಥೂಲ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದರೆ 2009–10ರಲ್ಲಿ ರಾಜ್ಯದ ಆರ್ಥಿಕತೆ ಶೇ. 6ರ ಗತಿಯಲ್ಲಿ ವಾಸ್ತವಿಕವಾಗಿ ಬೆಳವಣಿಗೆ ಹೊಂದಬಹುದೆಂದು ಊಹಿಸಲಾಗಿದೆ. 2009–10ರಲ್ಲಿ ಉಂಟಾಗಬಹುದಾದ ಕಡಿಮೆ ಹಣದುಬ್ಬರದ ಸಾಧ್ಯತೆಗಳನ್ನು ಗಮನಿಸಿದಾಗ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು 2008–09ರಲ್ಲಿ 2,68,138 ಕೋಟಿ ರುಪಾಯಿಗಳಿದ್ದು ಅದಕ್ಕೆ ಪ್ರತಿಯಾಗಿ ಪ್ರಸಕ್ತ ಮಾರುಕಟ್ಟೆ ದರಗಳಲ್ಲಿ 2009–10ರಲ್ಲಿ 294952 ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

23. ರಾಷ್ಟ್ರೀಯ ಮಟ್ಟದಲ್ಲಿ ಸ್ಥೂಲ ಆರ್ಥಿಕ ಪ್ರವೃತ್ತಿಗಳು, ಮುಖ್ಯವಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ತತ್ಪರಿಣಾಮದ ಕಾರಣ ಸಾಧಾರಣ ಆರ್ಥಿಕ ಬೆಳವಣಿಗೆ ಆಗಬಹುದೆಂದು ಸೂಚಿಸುತ್ತವೆ. ಈ ಸಾಧಾರಣ ಬೆಳವಣಿಗೆ ಎಲ್ಲ ವಲಯಗಳಿಗೂ ಅನ್ವಯಿಸುತ್ತದೆ. ಜಾಗತಿಕ ಆರ್ಥಿಕತೆಯಲ್ಲಿ ಉಂಟಾಗಿರುವ ಈ ನಿಧಾನಗತಿ ರಫ್ತು ಆಧಾರಿತ ಕೈಗಾರಿಕೆಗಳ ಮೇಲೆ ಮತ್ತು ಸೇವಾ ವಲಯಗಳ ಮೇಲೆ ಹೆಚ್ಚು ತೀವ್ರವಾಗಿ ಪ್ರತಿಕೂಲ ಪರಿಣಾಮ ಬೀರುತ್ತದೆಂದು ನಿರೀಕ್ಷಿಸಲಾಗಿದೆ. ಈ ಆಘಾತ ಮಧ್ಯಮ ಅವಧಿಯವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಸೇವಾ ವಲಯದಲ್ಲಿ ಕರ್ನಾಟಕ ಹೆಚ್ಚಿನ ಪಾಲು ಹೊಂದಿರುವುದರಿಂದ ಮಾಹಿತಿ ತಂತ್ರಜ್ಞಾನ ಮತ್ತು

ಜವಳಿ ಆಧರಿತ ಉದ್ಯಮಗಳು ರಾಜ್ಯದ ಆರ್ಥಿಕತೆಯಲ್ಲಿ ಹೆಚ್ಚು ಪರಿಣಾಮವನ್ನು ಉಂಟುಮಾಡುವ ಸಂಭವವಿದೆ. ಆದಾಗ್ಯೂ 2009–10ರ ನಂತರ ಬೆಳವಣಿಗೆಯು ಶೇ.9ರ ಸಾಮರ್ಥ್ಯ ಮಟ್ಟಕ್ಕೆ ಸುಧಾರಣೆಗೊಳ್ಳಬಹುದೆಂಬ ನಿರೀಕ್ಷೆ ಇದೆ.

ಸಿ. ಹಣದುಬ್ಬರ ಪ್ರವೃತ್ತಿಗಳು

24. 2008–09ರ ಬಹುಪಾಲು ಅವಧಿಯಲ್ಲಿ ಇದ್ದ ಅಧಿಕ ಹಣದುಬ್ಬರದ ಪ್ರಮಾಣ ನಿಧಾನಗತಿಯಲ್ಲಿ ಕಡಿಮೆಯಾಗಿದ್ದು ಈಗ 2009ರ ಜನವರಿ 31ಕ್ಕೆ ಕೊನೆಗೊಳ್ಳುವ ವಾರದಲ್ಲಿ ಅದು ಶೇ. 4.34ರಷ್ಟಿದೆ. ತೈಲ ಮತ್ತು ಇತರ ಸಾಮಗ್ರಿಗಳ ಬೆಲೆಗಳಲ್ಲಿನ ಅನಿಶ್ಚಿತತೆಯಿಂದಾಗಿ ಮತ್ತು ತಯಾರಿಕಾ ವಲಯದ ಸರಬರಾಜು ಸರಣಿಯಲ್ಲಿನ ಬೆಲೆ ಏರಿಸುವ ಇತರ ಸಂಬಂಧಿತ ಅಂಶಗಳಿಂದಾಗಿ, 2009–10ನೇ ವರ್ಷದಲ್ಲಿ ಉಂಟಾಗಬಹುದಾದ ಹಣದುಬ್ಬರದ ಗತಿಯನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ, ಆದಾಗ್ಯೂ ಕೇಂದ್ರ ಆಯವ್ಯಯದಿಂದ ಮತ್ತು ಕೇಂದ್ರ ಆಯವ್ಯಯಕ್ಕೆ ನಿಗದಿಪಡಿಸಿದ ಕೊರತೆ ಗುರಿಗಳಿಂದ ಸೂಚನೆಯನ್ನು ಪಡೆಯುವುದಾದರೆ ಮಧ್ಯಾವಧಿ ಹಣದುಬ್ಬರ ಶೇ.4ರಷ್ಟು ಎಂದು ಭಾವಿಸಲಾಗಿದೆ.

ಡಿ. ಕಾರ್ಯನೀತಿ ಮಧ್ಯಸ್ತಿಕೆಗಳು

25. ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಬೆಳವಣಿಗೆಯನ್ನು ಸ್ಥಿರಗೊಳಿಸಲು ಎಲ್ಲ ಮೂರು ವಲಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಕಾರ್ಯತಂತ್ರವನ್ನು ಗುರುತಿಸಬೇಕು ಮತ್ತು ಆರ್ಥಿಕ ಸ್ಥಿತಿಯನ್ನು ಶೀಘ್ರವಾಗಿ ಸುಧಾರಿಸುವ ನಿಟ್ಟಿನಲ್ಲಿ ತೀವ್ರ ಬೆಳವಣಿಗೆಗೆ ಅಡ್ಡಿಯಾಗುವ ತೊಂದರೆಗಳನ್ನು ನಿವಾರಿಸಬೇಕು. ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ಮಾಡಲಾದ ಒಂದು ಬಾರಿಯ ತಿದ್ದುಪಡಿಯ ಮೂಲಕ ಪಡೆಯಲಾದ ಹೆಚ್ಚಿನ ಮುಂಗಡವನ್ನು ನ್ಯಾಯಯುತ ಹಣಹೂಡಿಕೆ ಮತ್ತು ಆಸ್ತಿ ಸೃಜನೆ ಮೂಲಕ ಬಂಡವಾಳ ವೆಚ್ಚಕ್ಕಾಗಿ ಬಳಸಿಕೊಳ್ಳಲಾಗುವುದು. ಹಣ ಹೂಡಿಕೆಗೆ ಅತ್ಯುತ್ತಮ ಪರಿಹಾರ ಕಂಡುಹಿಡಿಯಲು ಮತ್ತು ಕನಿಷ್ಠ ಕಾಲಾವಧಿಯಲ್ಲಿ ಬೆಳವಣಿಗೆಯ ಉತ್ತಮ ಗುಣಮಟ್ಟ ಸಾಧಿಸಲು ಸರ್ಕಾರಿ ಸೇವಾ ನಿರ್ವಹಣೆಯಲ್ಲಿ ದಕ್ಷತೆ ಹೆಚ್ಚಿಸುವ ಹಾಗೂ ಆಡಳಿತವನ್ನು ಉತ್ತಮಗೊಳಿಸಬಲ್ಲ ಹಲವಾರು ಸಂಬಂಧಿತ ಸಾಂಸ್ಥಿಕ ಸುಧಾರಣೆಗಳನ್ನು ಪ್ರಾರಂಭಿಸುವುದು ಅವಶ್ಯವಾಗಿದೆ. ಇಂಥ ಕ್ರಮಗಳಲ್ಲಿ ಭೂಮಿ ಖರೀದಿಯನ್ನು ಪರಿಮಿತಗೊಳಿಸುವುದು, ಅನುಮತಿಗಳು ಹಾಗೂ ಶಾಸನಾತ್ಮಕ ಅನುಮೋದನೆಗಾಗಿ ಕಾಲಾವಧಿಯನ್ನು ಕಡಿಮೆ ಮಾಡುವುದು, ಶೀಘ್ರ ವ್ಯಾಜ್ಯ ತೀರ್ಮಾನ, ಪಾಲನಾ ಷರತ್ತುಗಳನ್ನು ಸರಳಗೊಳಿಸುವುದು, ಕೃಷಿಯಲ್ಲಿ ಖಾಸಗಿ ಹಣ ಹೂಡಿಕೆಗೆ ಅವಕಾಶ ಕಲ್ಪಿಸುವುದು, ಖಾಸಗಿ ಸಹಭಾಗಿತ್ವವನ್ನೂ ಒಳಗೊಂಡಂತೆ ಕೌಶಲ್ಯ ಅಭಿವೃದ್ಧಿ ಮುಂತಾದವುಗಳನ್ನು ಒಳಗೊಂಡಿದ್ದು, ಇವೆಲ್ಲವನ್ನೂ ಈ ವರ್ಷಾವಧಿಯಲ್ಲಿ ಶ್ರದ್ಧಾಪೂರ್ವಕವಾಗಿ ಅನುಷ್ಠಾನಗೊಳಿಸಬೇಕಾಗಿದೆ.